



# ಸೂಳೆಕೆರೆಯ ಪದರು ಕಲ್ಲುಗಳು

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ ಏಷ್ಯಾದ ಎರಡನೇ ಅತಿ ದೊಡ್ಡ ಕೆರೆ. ಆ ಕೆರೆಯ ಬಗ್ಗೆ ಅನೇಕ ಲೇಖನ ಹಾಗೂ ವಿಡಿಯೊಗಳು ಪ್ರಕಟವಾಗಿವೆ. ಆದರೆ ಈ ಸೂಳೆಕೆರೆಯಲ್ಲಿರುವ ಗುಡ್ಡಗಳಲ್ಲಿ ಇರುವ ವಿಶಿಷ್ಟವಾದ ಕಲ್ಲುಗಳ ಬಗ್ಗೆ ಈವರೆಗೂ ಅಷ್ಟು ಗಮನಹರಿಸಿಲ್ಲ ಎಂದು ಕಾಣುತ್ತದೆ. ಈ ಕೆರೆಯ ಸುತ್ತಲೂ ಗುಡ್ಡ ಆವರಿಸಿವೆ. ಅದರಲ್ಲಿ ಹೇರಳವಾದ ವಿಶಿಷ್ಟವಾದ ಕಲ್ಲುಗಳು ಇವೆ. ಇವು ತುಂಬಾ ಹಗುರವಾಗಿ ಹಾಗೂ ಪದರು ಪದರಾಗಿ ಇವೆ. ಆ ಕಲ್ಲುಗಳನ್ನು ಅಗೆದು ಹೊರತೆಗೆದಾಗ ನೀಟಾಗಿ ಪದರು ಪದರಾಗಿ ಹೊರಕ್ಕೆ ಬರುತ್ತವೆ. ಇನ್ನು ಕೆಲವು ಕಲ್ಲುಗಳು ಒಣಗಿದ ಮರದ ತುಂಡಿನಂತೆ ಕಾಣುತ್ತವೆ. ಪ್ರಕೃತಿಯ ವಿಚಿತ್ರ ಎಲ್ಲರನ್ನೂ ವಿಸ್ಮಯಗೊಳಿಸುತ್ತದೆ.

—ಎಸ್.ಎನ್. ಸೌಮ್ಯ ನಾಡಿಗ್, ಶಿವಮೊಗ್ಗ



# ಮರ ಭಕ್ಷಕ ಮರ

ಇತ್ತೀಚೆಗೆ ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟದ ವನ್ಯಧಾಮ ಅಥವಾ ಬಿ.ಆರ್. ಹಿಲ್ಸ್ ವನ್ಯಧಾಮದಲ್ಲಿ ಸಫಾರಿ ಹೋದಾಗ, ಪರಿಸರವಾದಿಗಳು ಒಂದು ವಿಸ್ಮಯಕಾರಿ ಮರವನ್ನು ತೋರಿಸಿದರು.

ಅದು ಸ್ಟ್ರಾಂಗ್ಲರ್ ಫಿಗ್ ಟ್ರೀ ಅಥವಾ ಹಿಸುಕುವ ಅಂಜೂರದ ಮರ. ಫೈಕಸ್ ವರ್ಗದ ಅರಳೀ, ಅಂಜೂರ ಮರಗಳ ಕೆಲವು ಜಾತಿಗಳ ಬೀಜಗಳನ್ನು ಹಕ್ಕಿಗಳು ಪ್ರಸಾರ ಮಾಡುತ್ತಾ ಬೇರೆ ಮರಗಳ ತೊಗಟೆ, ಕೊಂಬೆಗಳ ಸಂದಿಗಳಲ್ಲಿ ಹಾಕುತ್ತವೆ. ಆ ಬೀಜ ಮೊಳೆತು ಸಸ್ಯವಾದಾಗ ಈ ಆತಿಥೇಯ ಮರದಿಂದ ಪೋಷಕಾಂಶಗಳನ್ನು ಪಡೆಯುತ್ತದೆ. ಇದು ಹೀಗೆ ಆರಂಭಿಕ ಜೀವನದಲ್ಲಿ ಪರಾವಲಂಬಿಯಾಗಿದ್ದು ಕ್ರಮೇಣ ಬಿಳಲು ಬೇರುಗಳನ್ನು ಬಿಡುತ್ತದೆ. ಈ ಬಿಳಲು ಬೇರುಗಳು ಹಾಗೂ ಅದರ ಕಾಂಡದಿಂದ ಕ್ರಮೇಣ ಅತಿಥೇಯ ಮರವನ್ನು ಸುತ್ತುತ್ತಾ, ಈ ಮರ ಅದನ್ನು ಹಿಸುಕಿ ಸಾಯಿಸುತ್ತದೆ!

ಅನಂತರ ಬಿಳಲು ಬೇರುಗಳು ನೆಲ ಮುಟ್ಟಲು, ಇದು ಸ್ವತಂತ್ರ ಜೀವನ ನಡೆಸುತ್ತದೆ. ಹೀಗೆ ಅತಿಥೇಯ ಮರವನ್ನು ಹಿಸುಕುವುದರಿಂದ ಇದನ್ನು ಸ್ಟ್ರಾಂಗ್ಲರ್ ಫಿಗ್ ಮರ ಎನ್ನುತ್ತಾರೆ. ಈ ಚಿತ್ರದಲ್ಲಿ ಹಿಸುಕುತ್ತಿರುವ ಬಿಳಿ ಮರವನ್ನೂ ಕಂದು ಬಣ್ಣದ ಅತಿಥೇಯ ಮರವನ್ನೂ ಕಾಣಬಹುದು.

—ಬಿ.ಆರ್. ಸುಹಾಸ್, ಬೆಂಗಳೂರು

# ಬೀಜದ ಉಂಡೆ

ಆಮ್ಲಜನಕದ ಬಗ್ಗೆ ಇಂದು ಎಲ್ಲಿಲ್ಲದ ಪ್ರಾಮುಖ್ಯತೆ ಉಂಟಾಗಿದೆ. ಜೀವವಾಯುವನ್ನು ನಮಗೆ ಉಚಿತವಾಗಿ ನೀಡುವ ಮರಗಳನ್ನು ಬೆಳೆಸಲು ಸರಳವಾದ ಕ್ರಿಯೆಯೊಂದಿದೆ.

ಜಪಾನಿನ ಶಿಕೊಕು ದ್ವೀಪದ ಸಸ್ಯ ರೋಗತಜ್ಞ, ರೈತ, ತತ್ವಜ್ಞಾನಿ ಹಾಗೂ ನೈಸರ್ಗಿಕ ಕೃಷಿ ಪದ್ಧತಿಯ ಪಿತಾಮಹ ಮಸನೋಬು ಫುಕುವೋಕಾ ಅವರು 'ಬೀಜದ ಉಂಡೆ' ವಿಧಾನವನ್ನು ಕಂಡುಹಿಡಿದರು. ಮಣ್ಣು ಮತ್ತು ಬೀಜಗಳೆರಡನ್ನೂ ಸಂರಕ್ಷಿಸಿ ಸಹಜವಾಗಿ ಮರಗಳನ್ನು ಬೆಳೆಸುವ ಈ ವಿಧಾನವನ್ನು ಜಗತ್ತಿನಾದ್ಯಂತ ಪಸರಿಸಿದರು. ಮಣ್ಣು, ಗೊಬ್ಬರ ಮತ್ತು ನೀರಿನ ಮಿಶ್ರಣದಲ್ಲಿ ಬೀಜಗಳನ್ನು ಹುದುಗಿಸಿ ಉಂಡೆಗಳನ್ನು ತಯಾರಿಸಿ ಒಂದೆರಡು ದಿನಗಳ ಕಾಲ ಬಿಸಿಲಿನಲ್ಲಿ ಒಣಗಿಸುವುದು. ಹೀಗೆ ತಯಾರಿಸಿದ ಉಂಡೆಗಳನ್ನು ಮಳೆಗಾಲದಲ್ಲಿ, ಬೆಳೆಯಲು ಅವಕಾಶವಿರುವ ಜಾಗಗಳಲ್ಲಿ ಎಸೆದರೆ ಅವು ಮೊಳಕೆಯೊಡೆದು ಬೆಳೆಯುತ್ತವೆ.

—ಮೃದುಲಾ ಟಿ.ಎಂ., ಬೆಂಗಳೂರು

